ಕೊಟ್ಟರೆ ಅದು ಈ ಮನೆಯ ಪುಣ್ಯ' ಎಂದು ದುಂಡಪ್ಪ ಅಲ್ಲಿಯೇ ಇದ್ದ ಹಿರಿಯರೊಬ್ಬರ ಕಿವಿಯಲ್ಲಿ ಹೇಳಿದ. ಅವರು ಸಹ ಒಳಗೆ ಹೋದರು. ಈಗ ಮುನ್ನುಗ್ಗದಿದ್ದರೆ ಆಗುವುದಿಲ್ಲವೆಂದು ದುಂಡಪ್ಪನೆ ಅವರೆಲ್ಲ ಮಾತಾಡುತ್ತಿದ್ದ ನಡುಮನೆಯೊಳಗೆ ಕಾಲಿಟ್ಟ. ಅವರು ಬೈಯ್ದರೆ ಬೈಯ್ಯೊಳ್ಳಲಿ!

ಹುಡುಗಿ ಮಾತಾಡುತ್ತಿದ್ದಳು: 'ಅಂವನ ಮಕಾ ನೋಡಬೆ ಯವ್ವಾ. ಬರೇ ಗುಳ್ಳಿ ಕಾಣ್ತಾವು. ತಲಿ ಅರ್ಧ ಬೋಳಾಗೇತಿ.' ಆಕೆ ಮತ್ತೇನೋ ಹೇಳುವವಳಿದ್ದಳು. ದುಂಡಪ್ಪನನ್ನು ನೋಡಿ ಸುಮ್ಮನಾದಳು.

'ನೋಡವಾ ಅನಸವ್ವ, ಮನಸ್ಸಿನ ಚೆಂದ ಸೈತ ನೋಡಬೇಕು. ನೀ ಚೆಲುವಿ ಅದಿ, ನಾ ಒಪ್ಪತೇನಿ. ದೇವಪ್ಪನ ಮುಖ ಸ್ವಲ್ಪ ಕಲಿ ಆಗೇದ. ಆದರ ಮನಸ್ಸು ಏನೈತಲ್ಲ ಅದು ಹಾಲ ಇದ್ದಂಗ. ಅನಸವ್ವ, ನೀನು ಮಗಳು ಇದ್ದಂಗ. ನಿನಗ ಅನ್ಯಾಯ ಮಾಡ್ತೆವೇನು? ದೇವಪ್ಪನ ಕರುಳು ಹೆಂಗರಳು. ಅವನ ಅಂತರಂಗ ಚುಲೋ ಇದ್ದಿದ್ದಕ್ಕ ನಿಮ್ಮ ಅಪ್ಪಅವ್ವನ ಮುಂದ ಈ ಮಾತು ಹೇಳಾಕಹತ್ತೇನಿ. ನೀ ಬಂದು ಅಲ್ಲಿ ದುಡಿಯೋದಿಲ್ಲ, ದುಕ್ಕ ಪಡೋದಿಲ್ಲ. ದೊಡ್ಡ ಹೊಟೇಲು ಐತೇ ತಾಯಿ. ನೀನು ಅದರ ಮಾಲಕಳು ಆಗ್ತಿದೀ. ಸಾಕಷ್ಟು ಹೊಲ ಮನಿ ಅದಾವು. ಇನ್ನು ನಿನ್ನ ಮನಸ್ಸು. ಅನಸವ್ವ, ನಾವಿನ್ನು ಬರ್ತೇವಿ. ಅವ್ವಾರ, ಹಿರಿಯರೆ, ನಾವಿನ್ನು ಬರ್ತೇವಿ. ಯಾವುದಕ್ಕೂ ಪತ್ರ ಬರೆದು ತಿಳಿಸ್ರಿ.' ದುಂಡಪ್ಪಕಾಕಾ ಅಷ್ಟು ಹೇಳಿ ಬಂದ. ತಿಂಗಳಾದರೂ ಅವರಿಂದ ಏನೂ ಉತ್ತರ ಬರಲಿಲ್ಲ. ದೇವಪ್ಪ ಚಡಪಡಿಸುತ್ತಿದ್ದ.

ಅತ್ತ ಅನಸವ್ವಳ ಅವ್ವ ಮಗಳಿಗೆ ಬೋಧೆ ನಡೆಸಿದ್ದಳು: 'ಏಯ್ ಅನಸವ್ವ, ನೀನು ಮಳ್ಳ ಅದೀ. ಗಂಡಸರನ್ನ ಆರಿಸೋದೈತೇನು? ನಮ್ಮ ಕಾಲಕ್ಕ ಹೆಂಗಿತ್ತು ಗೊತ್ತೈತೇನು? ನಾವು ನಮಗ ಆರಿಸಿದ ಗಂಡನನ್ನು ನೋಡೋದು ಮದುವಿ ಮಂಟಪದಾಗ ಆಗಿತ್ತು. ದೇವಪ್ಪ ಚೆಂದಿಲ್ಲ ಅಂತೀಯಲ್ಲ, ಅನ್ನು. ಆದರ ಅಂವ ನಿನ್ನ ಇಷ್ಟಪಟ್ಟಾನು, ಎಷ್ಟೊ ಮಂದಿ ತಿರಸ್ಕಾರ ಮಾಡಿದ್ರೂ ಸೈತ ಈಕಿ ತನ್ನ ಮ್ಯಾಲ ವಿಶ್ವಾಸ ಇಟ್ಟು ಮದುವಿಯಾದಳಲ್ಲ ಅಂತ ನಿನಗೆ ಬೇಕಾದ್ದು, ಬ್ಯಾಡಾದ್ದು ಮಾಡಿ ಕೊಡಸ್ತಾನ. ಹೇಂತಿಯನ್ನ ಚುಲೋ ನೋಡ್ಕೋತಾನ. ನೀನು ಹಾಕಿದ ಗೆರಿ ದಾಟಿ ಹೋಗಂಗಿಲ್ಲ.'

ಒಂದು ದಿನ ಅನಸವ್ವ ಹೂಂ ಅಂದಳು. ಮಲ್ಲೂರಿಗೆ ಅಂದೇ ಪತ್ರ ಹೋಯಿತು. ಆ ಪತ್ರ ಬಂದಾಗ ದುಂಡಪ್ಪನಿಗಾದ ಸಂತೋಷ ಅಷ್ಟಿಷ್ಟಲ್ಲ. ಜೀವನದಲ್ಲಿಯೆ ಅವನಿಗೆ ಅಷ್ಟು ಆನಂದ ಆಗಿರಲಿಲ್ಲ. ದೇವಪ್ಪನ ಕಾಲುಗಳಂತೂ ನೆಲದ ಮೇಲಿರಲಿಲ್ಲ. ಮದುವೆ ದಿನ ಅನಸವ್ವ ಅಷ್ಟೇನೂ ಉತ್ಸಾಹದಿಂದ ಇರಲಿಲ್ಲ. ಮಂಟಪದಲ್ಲಿ ತನ್ನ ಅವ್ವ, ಚಿಗವ್ವ, ಕಾಕಾ, ದೊಡ್ಡಪ್ಪ ಮತ್ತು ಸ್ವಾಮಿಗಳು ಬಾ ಅಂದಾಗ ಬರುವಳು. ಕೂಡು ಎಂದಾಗ ಕೂಡುವಳು.

'ಇಂವನ್ನ ಎಲ್ಲಿಂದ ಹಿಡಕೊಂಡು ತಂದಾರ? ಬಂಗಾರದಂಥ ಹುಡುಗ ಅಂತಿದ್ರು, ನೋಡಿದ್ರ ತಗಡ ಆಗ್ಯಾನ.' ದೇವಪ್ಪನನ್ನು ನೋಡುತ್ತ ಆಕೆಯ ಗೆಳತಿಯರು ಹಿಂದಿನ ರಾತ್ರಿಯಿಂದಲೆ ಕೀಟಲೆ, ಅಣಕ ನಡೆಸಿದ್ದರು. ಈ ಸಂಬಂಧಕ್ಕೆ ತಾನು ಒಲ್ಲೆ ಅಂದಿದ್ದರೆ ಒಳ್ಳೆಯದಿತ್ತೇನೋ! ಅನಸೂಯೆ ಒಂದೆ ಸಮನೆ ಪರಿತಪಿಸುತ್ತಿದ್ದಳು. ಹತಾಶೆ, ಕೋಪ, ಕಿರಿಕಿರಿ ಅವಳ ವರ್ತನೆಯಲ್ಲಿ ತೋರುತ್ತಿತ್ತು. ಇಲ್ಲಿ ಮದುವೆ ನಡೆಯುತ್ತಿದೆ, ಜನ ನೋಡುತ್ತಿದ್ದಾರೆ, ತಾನು ಅದರಲ್ಲಿ ಪಾಲ್ಗೊಳ್ಳುತ್ತಿದ್ದೇನೆ ಎನ್ನುವುದರ ಪರಿವೆಯೇ ಅವಳಿಗೆ ಇದ್ದಂತೆ ಅನಿಸುತ್ತಿರಲಿಲ್ಲ. ಅವ್ವ, ಅಪ್ಪನ ಮಾತಿಗೆ ತಾನು ಯಾಕೆ ಒಪ್ಪಿಕೊಂಡೆ? ಅಕಸ್ಮಾತ್ ಒಪ್ಪಿಕೊಳ್ಳದಿದ್ದರೆ ಏನಾಗುತ್ತಿತ್ತು? ತನ್ನ ವಿವಾಹವೇ ಆಗುತ್ತಿರಲಿಲ್ಲವೆ? ಆದರೆ ಒಂದು ಮನಸ್ಸು ಹೀಗೂ ನಡೆಯುತ್ತಿತ್ತು ಇಷ್ಟು ದೊಡ್ಡ ಸಂಭ್ರಮದಲ್ಲಿ ಗಂಡಿನ ಕಡೆಯವರು ಮದುವೆ ಹಮ್ಮಿಕೊಂಡಿದ್ದಾರೆ. ಎಷ್ಟೆಲ್ಲ ಆದರಾತಿಥ್ಯ ಮಾಡುತ್ತಿದ್ದಾರೆ. ತನ್ನನ್ನು, ಊರಿಂದ ಬಂದ ತಮ್ಮೂರಿನ ಜನರನ್ನೆಲ್ಲ ಎಷ್ಟೊಂದು ಆದರದಿಂದ ಕಾಣುತ್ತಿದ್ದಾರೆ. ತಾನು ಎಷ್ಟು ಚೆಂದ ಇದ್ದೇನೆ, ಹುಡುಗಿ ಕರ್ಪೂರದ ಗೊಂಬೆಯಾಗಿದ್ದಾಳೆ ಎಂದು ಅನೇಕ ಹೆಂಗಸರು ತನ್ನ ಗಲ್ಲ ಸವರಿ ಹೋದರಲ್ಲ! ತಮ್ಮ ಬಳಗದಲ್ಲಿ ಇಷ್ಟೊಂದು ವೈಭವದ ಮದುವೆ ನಡೆದಿರಲೇ ಇಲ್ಲವಲ್ಲ! ಅನಸೂಯೆಯ ಮನಸ್ಸು ಇತ್ತೊಮ್ಮೆ, ಅತ್ತೊಮ್ಮೆ ಹೊಯ್ದಾಡುತ್ತಿತ್ತು!

* * *

ಅಂತೂ ದೇವಪ್ಪ ಮದುವೆಯಾಗಿಯೇ ತೀರುವೆನು ಎನ್ನುವ ತನ್ನ ಪ್ರತಿಜ್ಞೆಯನ್ನು ಹುಸಿಹೋಗಲು ಬಿಡಲಿಲ್ಲ. ಅವನ ಸಂಭ್ರಮದಲ್ಲಿ ಇಡೀ ಊರಿಗೆ ಊರು ಪಾಲ್ಗೊಂಡಿತು. ಹರ್ಷೋದ್ಗಾರ ಮಾಡಿತು, ಕೇಕೆ ಹಾಕಿತು, ಕುಣಿದು ಕುಪ್ಪಳಿಸಿತು. ಒಂದು ವಾರ ಕಾಲ ಊರು ಆನಂದಸಾಗರದಲ್ಲಿ ತೇಲಾಡಿತು. ಆ ವಾರ ಪೂರ್ತಿ ದೇವಪ್ಪ ತನ್ನ ಹೊಟೇಲಿಗೆ ಬಂದವರಿಂದ ದುಡ್ಡು ತೆಗೆದುಕೊಳ್ಳಲಿಲ್ಲ.

'ನಮ್ಮ ಮದುವಿಗೆ ಬಂದು ಹರಸಿದರಲ್ಲ? ಬಾಳ ಉಪಕಾರ ಆತು. ನಿಮ್ಮೆಲ್ಲರ ಹಾರೈಕೆ ಇದ್ದಿದ್ದಕ್ಕ ನಂದು ಮದುವಿ ಆತು. ಈ ಊರು ನನಗ ಅನ್ನ ಹಾಕಲಿಕ್ಕೆ ಹತ್ತೇದ. ಅದರ ಋಣ ತೀರಿಸಲಿಕ್ಕೆ ಆಗ್ತದೇನು? ನಮ್ಮ ಖುಷಿನೂ ಹಂಚಿಕೊಳ್ಳಬೇಕಂತ ಮೂರ್ನಾಲ್ಕು ದಿನ ಎಲ್ಲರಿಗೂ ನಮ್ಮ ಆತಿಥ್ಯ ಇರ್ತದ. ದಯಮಾಡಿ ಸ್ವೀಕರಿಸಬೇಕು.' ದೇವಪ್ಪ ಮತ್ತು ಅನುಸೂಯ ಮದುವೆಯಾದ ಮೇಲೆ ಮೊದಲ ಸಲ ಮಲ್ಲೂರಿಗೆ ಬಂದಾಗ ಊರು ಅವರನ್ನು ಸ್ವಾಗತಿಸಿದ ರೀತಿಯನ್ನು ನೋಡಬೇಕಿತ್ತು. ಜಗತ್ತಿನಲ್ಲಿ ಮದುವೆಯಾದವರು ಇವರಿಬ್ಬರೆ ಏನೋ, ಪ್ರಪಂಚದ ಅದ್ಭುತ ಜೋಡಿ ಇವರದೆ ಏನೋ ಎನ್ನುವಂತೆ ಅವರನ್ನು ಅಲಂಕಾರಗೊಂಡ ಟ್ರ್ಯಾಕ್ಟರಿನಲ್ಲಿ ಮಲ್ಲೂರಿನಲ್ಲಿ ಮೆರವಣಿಗೆ ಮಾಡಲಾಯಿತು. ಹಿಂದೆಂದೂ ಮದುವೆಯೊಂದರ ತರುವಾಯ ಮಲ್ಲೂರಿನಲ್ಲಿ ಇಂತಹ ಪಾರ್ಟಿಯೇ ಏರ್ಪಾಟಾಗಿರಲಿಲ್ಲ. ಮೆರವಣಿಗೆಯಲ್ಲಿ ಅನುಸೂಯ ಮತ್ತು ದೇವಪ್ಪ ಇಬ್ಬರೂ ವಿಶೇಷ ಚೆಲುವಿನಿಂದ ಕಂಗೊಳಿಸುತ್ತಿದ್ದರು. ಮದುವೆಯಲ್ಲಿ ತಯಾರಾಗಿದ್ದಕ್ಕಿಂತ ಹೆಚ್ಚಿನ ರೀತಿಯಲ್ಲಿ ಮದುಮಕ್ಕಳು ಮತ್ತೊಮ್ಮೆ ತಯಾರಾಗಿದ್ದರು. ಅನುಸೂಯ ಉಟ್ಟುಕೊಂಡಿದ್ದ ಬನಾರಸ ರೇಷ್ಮೆ ಸೀರೆಯ ಅಂದವನ್ನು ಎಲ್ಲರೂ ಹೀರಿಕೊಳ್ಳುವವರೇ ಆಗಿದ್ದರು.

ಬೈಲಹೊಂಗಲದ ಆ ಶೆಟ್ಟರ ಅಂಗಡಿಯಲ್ಲಿ ಇಷ್ಟು ಒಳ್ಳೆಯ ಸೀರೆಗಳು ಸಿಗುತ್ತವೆಯೆ? ತಮಗೆ ಗೊತ್ತೇ ಇರಲಿಲ್ಲವೆಂದು ಕೆಲವು ಹೆಂಗಸರು ಕರುಬಿದರು. ಕಡುಗೆಂಪಿನ ಬನಾರಸ ಸೀರೆಯ ವಿನ್ಯಾಸ ಅದೆಷ್ಟು ಮೋಹಕವಾಗಿತ್ತು. ಬಂಗಾರ ಹಾಗೂ ಬೆಳ್ಳಿಯ ಎಳೆಗಳನ್ನು ಅಲ್ಲಿ ಪೋಣಿಸಿದ ಪರಿಯಂತೂ ತುಂಬ ವಿಶಿಷ್ಟವಾಗಿತ್ತು. ಆ ಜರಿಯ ಕಿಮ್ಮತ್ತೇ ಹತ್ತು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿರಬೇಕು. ಚಿನ್ನದ ಎಲೆಗಳು ಈಗಷ್ಟೇ ಸೀರೆಯಲ್ಲಿ ಅರಳಿನಿಂತಿವೆ ಎನಿಸುತ್ತದೆ. ಸೆರಗಿನ ಬಾರ್ಡರ್ ತುಂಬ ರಮ್ಯವಾಗಿ ಕಾಣುತ್ತಿತ್ತು. ಆ ಸೆರಗು ಹೊದ್ದವಳ ಸೌಂದರ್ಯವನ್ನು ಇಡೀ ಊರು ಬಣ್ಣಿಸುತ್ತಿತ್ತು. ದೇವಪ್ಪನೂ ಇಂದು ಎಷ್ಟೊಂದು ಸೊಗಸಾಗಿ ಕಾಣುತ್ತಿದ್ದಾನೆ. ಆತ ಸುತ್ತಿದ್ದ ಜರಿ ರುಮಾಲು ಅವನಿಗೆ ಎಷ್ಟೊಂದು ಒಪ್ಪಿತ್ತು. ಹುಣ್ಣಿಮೆ ಚಂದ್ರ ಮರ್ತ್ಯಕ್ಕೆ ಇಳಿದಿದ್ದಾನೆ! ಅವನ ಮುಖದಲ್ಲಿ ಯಾವ ಗುಳ್ಳೆಗಳೂ ಇಲ್ಲ. ಅವನೊಡಲಲ್ಲಿ ಯಾವ ಕಲೆಗಳೂ ಕಾಣುತ್ತಿಲ್ಲ. ನ್ಯೂನತೆಗಳಂತೂ ಅವನಲ್ಲಿ ಒಂದೂ ಇಲ್ಲ. ಅನುಸೂಯ ಆವತ್ತು ಎಷ್ಟೊಂದು ರಾದ್ಧಾಂತ ಮಾಡಿದ್ದಳು.

(ಸಶೇಷ)

## ಕಳೆದ ಸಂಚಿಕೆಯಲ್ಲಿ

ಮಲ್ಲೂರಿಗೆ ಬಂದ ಮೇಲೆ ಮಾಯವ್ವ ಎಲ್ಲರಿಗೂ ಬೇಕಾದವಳಾಗುತ್ತಾಳೆ. ಶಿವಪುತ್ರಪ್ಪ ಮೂರು ಮದುವೆಯಾದರೂ ಒಬ್ಬ ಪತ್ನಿಯೂ ಅವನ ಬಳಿ ಇರುವುದಿಲ್ಲ. ಹೀಗಾಗಿ ಶಿವಪುತ್ರಪ್ಪ, ದುಂಡಪ್ಪ ಕಾಕಾ ಮನೆಯಲ್ಲಿ ಬಾಡಿಗೆಗೆ ಇರುವಾಗ ತಾನೇ ಅಡುಗೆ ಮಾಡಿಕೊಂಡು ಉಣ್ಣುತ್ತಾನೆ ಎಂದು ಮಾಯವ್ವ ಆತನಿಗೆ ರೊಟ್ಟಿ ಪಲ್ಯ ಮಾಡಿಕೊಡುತ್ತಾಳೆ. ಈ ಉಪಕಾರಕ್ಕೆ ಪ್ರತಿಯಾಗಿ ಶಿವಪುತ್ರ, ಮಾಯವ್ವ ಪಂಚಾಯಿತಿ ಚುನಾವಣೆಗೆ ನಿಂತಾಗ ಮನೆಮನೆಗೆ ಹೋಗಿ ಮಾಯವ್ವ ಪರ ಮತ ಯಾಚಿಸುತ್ತಾನೆ. ಈ ಮಧ್ಯೆ ಶಿವಪುತ್ರಪ್ಪ ಮನೆಯ ಪಕ್ಕದ ಮತ್ತೊಬ್ಬ ಮಹಿಳೆಯನ್ನು ಮದುವೆಯಾಗುತ್ತಾನೆ. ಆದರೆ ಆಕೆ ಮಲ್ಲೂರಿಗೆ ಬರದೆ ಬೈಲಹೊಂಗಲದಲ್ಲೇ ಉಳಿಯುತ್ತಾಳೆ. ತನಗೆ ಮೋಸ ಮಾಡಿದಿ ನೀನು ಎಂದು ಶಿವಪುತ್ರಪ್ಪನನ್ನು ಜರಿಯುತ್ತಾಳೆ ಈತನ ಮಡದಿ.

